

1965ನೇ ವರ್ಷದ ಅಂತ್ಯಭಾಗ. ಲಂಡನ್ ನಗರ ತನ್ನ ಹಿಂದಿನ ಜೀವಕಳೆಯನ್ನು ಮರುಕಳಿಸಿಕೊಳ್ಳಲು ಸಜ್ಜುಗೊಳ್ಳುತ್ತಿತ್ತು. ಎರಡು ವರ್ಷಗಳ ಹಿಂದೆ ಪಟ್ಟಣ ಬಿಟ್ಟು ಓಡಿಹೋದ ಸಿರಿವಂತರೆಲ್ಲ, ಹೊಡೆದಾಟ ಮುಗಿದ ಮೇಲೆ ನೆಲಕ್ಕೆ ಚೆಲ್ಲಿದ ಚಿಲ್ಲರೆ ಆಯ್ದುಕೊಳ್ಳಲು ಬರುವವರ ಹಾಗೆ ಮೆಲ್ಲಗೇ ವಾಪಸ್ ಬರಲು ಶುರುಮಾಡಿದ್ದರು.

ಆದರೆ ಲಂಡನ್‌ನ ಥೇಮ್ಸ್ ನದಿ ದಡದಲ್ಲಿನ ಕೊಳೆಗೇರಿಯಂಥ ಬೀದಿ ‘ಕಾಕ್ ಲ್ಯಾಂಡ್ ಕೀ ಅಲೇ’ ಮಾತ್ರ ಸ್ಮಶಾನಸದೃಶವಾಗಿತ್ತು. ಆ ಬೀದಿಯಲ್ಲಿನ ಜೋಸೆಫ್ ಫೆನ್ನಿಯ ಮನೆ ಹುಡುಕಿಕೊಂಡು ಬಂದ ಚರ್ಚ್‌ನ ವಾರ್ಡನ್ ಹೆನ್ರಿ ಒಂದು ಕ್ಷಣ ಬೆಚ್ಚಿಬಿದ್ದ. ಬಾಗಿಲು ತೆಗೆದು ಕೋಳಿಗೂಡಿನಂಥ ಮನೆಯ ಒಳಗಡಿಯಿಟ್ಟವನಿಗೆ ಕಾಣಿಸಿದ್ದು ಜೀವಕಳೆಯನ್ನು ಕಳೆದುಕೊಂಡು ನಿಶ್ಚೇತಳಾಗಿ ಕುಳಿತಿದ್ದ ಎಲಿಜಬೆತ್. ಗಂಡ ಹಾಗೂ ಮೂವರು ಗಂಡುಮಕ್ಕಳನ್ನು ಕಳೆದುಕೊಂಡು ಪೂರ್ತಿ ಅನಾಥಳಾಗಿ ಕೂತಿದ್ದಳವಳು. ಹೆನ್ರಿ ಅಂಜಿಕೆಯಿಂದಲೇ ಚರ್ಚ್ ಪರವಾಗಿ ಮೂರು ನಾಣ್ಯಗಳನ್ನು ಅವಳೆದುರಿನ ಹಲಗೆಯ ಮೇಲೆ ಇಟ್ಟ. ಎಲಿಜಬೆತ್ ಒಮ್ಮೆ ಆ ನಾಣ್ಯಗಳನ್ನೂ ಒಮ್ಮೆ ಹೆನ್ರಿಯ ಮುಖವನ್ನೂ ದಿಟ್ಟಿಸಿದಳು. ಅವಳ ತುಟಿಗಳಲ್ಲಿ ಒಂದು ನಗು ಮೂಡಿತು. ಆ ನಗುವಿನಲ್ಲಿ ಎಂಥ ಕಲ್ಲಿನೆದೆಯನ್ನೂ ಕತ್ತರಿಸಬಲ್ಲಷ್ಟು ಹರಿತ ವಿಷಾದವಿತ್ತು. ಅವಳ ಕಣ್ಣುಗಳಲ್ಲಿ ಹೆನ್ರಿಗೆ, ಭೀಕರವಾಗಿ ಮಣ್ಣುಗೂಡಿದ ಆ ಬೀದಿಯ ಅಮಾಯಕ ಜೀವಗಳ ನೋವಿನ ನರಕ ಉರಿಯುತ್ತಿರುವ ಹಾಗೆ ಭಾಸವಾಯ್ತು. ಮತ್ತಲ್ಲಿ ನಿಲ್ಲಲಾಗದೇ ಹೊರಗೆ ಬಂದ ಹೆನ್ರಿಯ ಮನಸ್ಸಿನಲ್ಲಿ ಕೆಲವು ತಿಂಗಳುಗಳಲ್ಲಿ ತಾನು ನೋಡಿದ ಭೀಕರ ಮಾರಣಹೋಮದ ಛಿದ್ರ ಚಿತ್ರಗಳು ಮೂಡಲಾರಂಭಿಸಿದ್ದವು.

***

ಪ್ಲೇಗ್!

ಜಗತ್ತು ಕಂಡ ಅತ್ಯಂತ ಭೀಕರ, ವಿಕಾರ, ಅನಾಹುತಕಾರಿ ಸಾಂಕ್ರಾಮಿಕ ರೋಗಗಳಲ್ಲಿ ಪ್ಲೇಗ್‌ಗೆ ಎಲ್ಲಕ್ಕಿಂತ ಮೊದಲ ಸ್ಥಾನ. 1965 ಮತ್ತು 1966ರಲ್ಲಿ ಇಂಗ್ಲೆಂಡ್ ದೇಶದ ನಡುಮುರಿದು ನೆಲಕ್ಕೆ ಕೆಡವಿದ ಈ ಸಾಂಕ್ರಾಮಿಕ ಮಾರಿಯನ್ನು ಈಗಲೂ ‘ಗ್ರೇಟ್ ಪ್ಲೇಗ್’ ಎಂದೇ ನೆನಪಿಸಿಕೊಂಡು ಬೆಚ್ಚುವವರಿದ್ದಾರೆ. ಆ ರೋಗಕ್ಕೆ ಬಲಿಯಾದವರ ಸಂಖ್ಯೆ ಎಷ್ಟು ಎಂಬುದಕ್ಕೆ ಇಂದಿಗೂ ನಿಖರ ದಾಖಲೆಗಳಿಲ್ಲ. ಒಂದು ಅಂದಾಜಿನ ಪ್ರಕಾರ ಇಂಗ್ಲೆಂಡಿನ ಸುಮಾರು ಎರಡು ಲಕ್ಷ ಜನರು

